ಸಿ) ಮಂಗಳೂರು, ಉಡುಪಿ, ಭಟ್ಕಳ, ಹಾಗೂ ಶಿರಸಿ ನಗರಗಳಲ್ಲಿರುವ ಒಳಚರಂಡಿ ವ್ಯವಸ್ಥೆಯನ್ನು ಅಭಿವೃದ್ಧಿಪಡಿಸಲಾಗುವುದು ಕಾರವಾರ ನಗರಕ್ಕೆ ಹೊಸದಾಗಿ ಒಳಚರಂಡಿ ವ್ಯವಸ್ಥೆಯನ್ನು ಒದಗಿಸಲಾಗುವುದು.

ಡಿ) ಎಲ್ಲಾ ಪಟ್ಟಣಗಳಲ್ಲಿ ರಸ್ತೆಗಳನ್ನು ಅಭಿವೃದ್ಧಿಗೊಳಿಸಲಾಗುವುದು. ಪುತ್ತೂರಿನಲ್ಲಿ ಹೊಸ ರಸ್ತೆ ನಿರ್ಮಿಸಲಾಗುವುದು.

ಇ) ಕಡಿಮೆ ವೆಚ್ಚದ ಮನೆಗಳನ್ನು ಭಟ್ಕಳ ಹಾಗೂ ದಾಂಡೇಲಿ ನಗರಗಳಲ್ಲಿ ನಿರ್ಮಿಸಲಾಗುವುದು.

ಈಗಿರುವ ಅಂದಾಜಿನಂತೆ ಏಷ್ಯನ್ ಅಭಿವೃದ್ಧಿ ಬ್ಯಾಂಕ್ ಸಾಲವನ್ನು ಮಂಜೂರು ಮಾಡಿದಲ್ಲಿ ಈ ಮೇಲಿನ ಕಾಮಗಾರಿಗಳನ್ನು ಅಕ್ಟೋಬರ್ 1999 ನಂತರ ಕೈಗೊಳ್ಳಲಾಗುವುದು.

2) ಉಪಾಧ್ಯಕ್ಷರ ಚುನಾವಣೆ.

ಅಧ್ಯಕ್ಷರು :— ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳಿಗೆ ಉತ್ತರಗಳನ್ನು ಸದನದ ಮುಂದೆ ಮಂಡಿಸಲಾಯಿತು.

ಅಧ್ಯಕ್ಷರು :— ಮೂರು ಸೂಚನೆಗಳನ್ನು ನನ್ನ ಕಡೆಗೆ ಕಳುಹಿಸಿಕೊಟ್ಟಿದ್ದಾರೆ. ಮೊದಲನೇ ಸೂಚನೆಯನ್ನು ಓದುತ್ತೇನೆ. ಸೂಚಕರು ಅನುಮೋದಕರು ಅದನ್ನು ಒತ್ತಾಯ ಮಾಡುವುದಿಲ್ಲವೆಂದರೆ ನಾನು ಎರಡನೇ ಸೂಚನೆಗೆ ಹೋಗುತ್ತೇನೆ ಮೊದಲನೇ ಸೂಚನೆ ಏನೆಂದರೆ ಶ್ರೀಮತಿ ಎನ್. ಜ್ಯೋತಿ ರೆಡ್ಡಿ ಅವರನ್ನು ವಿಧಾನಸಭೆಯ ಉಪಾಧ್ಯಕ್ಷರನ್ನಾಗಿ ಚುನಾಯಿಸಬೇಕೆಂದು ಶ್ರೀಮತಿ ವಿಜಯಲಕ್ಷ್ಮಮ್ಮ ಬಂಡಿ ಸಿದ್ದೇಗೌಡ ಅವರು ಸೂಚಿಸುವುದು. ಶ್ರೀಮತಿ ಡಿ.ಜಿ. ಹೇಮಾವತಿಯವರು ಅನುಮೋದಿಸುವುದು.

ಶ್ರೀಮತಿ ವಿಜಯಲಕ್ಷ್ಮಮ್ಮ ಬಂಡಿ ಸಿದ್ದೇಗೌಡ :— ಮಾನ್ಯ ಅಧ್ಯಕ್ಷರೆ, ಶ್ರೀಮತಿ ಎನ್. ಜ್ಯೋತಿ ರೆಡ್ಡಿ ಅವರನ್ನು ವಿಧಾನಸಭೆಯ ಉಪಾಧ್ಯಕ್ಷರನ್ನಾಗಿ ಚುನಾಯಿಸಬೇಕೆಂಬ ಸೂಚನೆಯನ್ನು ಒತ್ತಾಯ ಮಾಡುವುದಿಲ್ಲ.

ಈಗ ನಾನು ಎರಡನೇ ಸೂಚನೆಯನ್ನು ಓದುತ್ತೇನೆ.

ಅಧ್ಯಕ್ಷರು :— ಶ್ರೀ ಸಿ.ಎನ್. ಪುಟ್ಟೇಗೌಡ ಅವರನ್ನು ವಿಧಾನಸಭೆಯ ಉಪಾಧ್ಯಕ್ಷರನ್ನಾಗಿ ಚುನಾಯಿಸಬೇಕೆಂದು ಶ್ರೀ ಹೆಚ್.ಎಸ್. ಪ್ರಕಾಶ್‌ರವರು ಸೂಚಿಸುವುದು.

ಶ್ರೀ ಬಿ.ಟಿ. ದೇವೇಗೌಡ :— ಅವರು ಅನುಮೋದಿಸುವುದು.

ಶ್ರೀ ಹೆಚ್.ಎಸ್. ಪ್ರಕಾಶ್ :— ಮಾನ್ಯ ಅಧ್ಯಕ್ಷರೆ, ಶ್ರೀ ಸಿ.ಎಸ್. ಪುಟ್ಟೇಗೌಡ ಅವರನ್ನು ವಿಧಾನಸಭೆಯ ಉಪಾಧ್ಯಕ್ಷರನ್ನಾಗಿ ಚುನಾಯಿಸಬೇಕೆಂದು ಇರುವ ಸೂಚನೆಯನ್ನು ಒತ್ತಾಯ ಮಾಡುವುದಿಲ್ಲ.

ಈಗ ಮೂರನೆಯ ಸೂಚನೆಯನ್ನು ಓದುತ್ತೇನೆ.

ಅಧ್ಯಕ್ಷರು :— ಶ್ರೀ ಚಂದ್ರಶೇಖರ ರೆಡ್ಡಿ ದೇಶಮುಖ್ ಮದನಾ ಅವರನ್ನು ವಿಧಾನಸಭೆಯ ಉಪಾಧ್ಯಕ್ಷರನ್ನಾಗಿ ಚುನಾಯಿಸಬೇಕೆಂದು ಶ್ರೀ ಚಂದ್ರಶೇಖರ್ ಸದಾಶಿವನಾಯಕ್ ರವರು ಸೂಚಿಸುವುದು. ಶ್ರೀ ಸೋಮ್ಲಾ ನಾಯಕ್‌ರವರು ಅನುಮೋದಿಸುವುದು.

ಶ್ರೀ ಚಂದ್ರಶೇಖರ್ ಸದಾಶಿವ ನಾಯಕ್ :— ಮಾನ್ಯ ಅಧ್ಯಕ್ಷರೆ, ಗುಲ್ಬರ್ಗ ಜಿಲ್ಲೆಯ ಸೇಡಂ ಕ್ಷೇತ್ರದ ಶಾಸಕರಾದ ಶ್ರೀ ಚಂದ್ರಶೇಖರ ರೆಡ್ಡಿ ದೇಶಮುಖ್ ಮದನಾ ಅವರನ್ನು ಹತ್ತನೆ ವಿಧಾನ ಸಭೆಯ ಉಪಾಧ್ಯಕ್ಷರನ್ನಾಗಿ ಚುನಾಯಿಸಬೇಕೆಂದು ಸೂಚಿಸುತ್ತೇನೆ.

ಶ್ರೀ ಸೋಮ್ಲಾ ನಾಯಕ್ :— ಮಾನ್ಯ ಅಧ್ಯಕ್ಷರೆ, ಶ್ರೀ ಚಂದ್ರಶೇಖರ್ ಸದಾಶಿವ ನಾಯಕ್‌ರವರು ಸೂಚಿಸಿರುವ ಪ್ರಸ್ತಾವವನ್ನು ನಾನು ಅನುಮೋದಿಸುತ್ತೇನೆ.

<u>ಪ್ರಸ್ತಾವವನ್ನು ಮಂಡಿಸಲ್ಪಟ್ಟಿತು.</u>

ಅಧ್ಯಕ್ಷರು :— ಈಗ ಶ್ರೀ ಚಂದ್ರಶೇಖರ್ ಸದಾಶಿವ ನಾಯಕ್‌ರವರು ಸೂಚಿಸಿರುವ ಹಾಗೂ ಶ್ರೀ ಸೋಮ್ಲಾ ನಾಯಕ್‌ರವರು ಅನುಮೋದಿಸಿರುವ ಪ್ರಸ್ತಾವವನ್ನು ಸಭೆಯ ಮತಕ್ಕೆ ಹಾಕುತ್ತೇನೆ. ಪ್ರಸ್ತಾವ ಏನೆಂದರೆ. "ಶ್ರೀ ಚಂದ್ರಶೇಖರ ರೆಡ್ಡಿ ದೇಶಮುಖ್ ಮದನಾ ಅವರನ್ನು ಹತ್ತನೆ ವಿಧಾನಸಭೆಯ ಉಪಾಧ್ಯಕ್ಷರನ್ನಾಗಿ ಚುನಾಯಿಸುವುದು"

ಪ್ರಸ್ತಾವ ಸರ್ವಾನುಮತದಿಂದ ಅಂಗೀಕರಿಸಲ್ಪಟ್ಟಿತು ಮತ್ತು ಶ್ರೀ ಚಂದ್ರಶೇಖರ ರೆಡ್ಡಿ ದೇಶಮುಖ್ ಮದನಾ ಅವರನ್ನು ಉಪಾಧ್ಯಕ್ಷರನ್ನಾಗಿ ಚುನಾಯಿಸಲಾಯಿತು.

ಅಧ್ಯಕ್ಷರು :— ಈಗ ಪ್ರಸ್ತಾವವನ್ನು ಸೂಚಿಸಿದವರು ಹಾಗೂ ಅನುಮೋದಿಸಿದವರು ಶ್ರೀ ಚಂದ್ರಶೇಖರ ರೆಡ್ಡಿ ದೇಶಮುಖ್ ಮದನಾರವರನ್ನು ಉಪಾಧ್ಯಕ್ಷರ ಸ್ಥಾನಕ್ಕೆ ಕರೆದುಕೊಂಡು ಬರಬೇಕೆಂದು ನಾನು ಸೂಚಿಸುತ್ತೇನೆ.

(ಶ್ರೀ ಚಂದ್ರಶೇಖರ ರೆಡ್ಡಿ ದೇಶಮುಖ್ ಮದನಾರವರು ಉಪಾಧ್ಯಕ್ಷರ ಸ್ಥಾನವನ್ನು ಅಲಂಕರಿಸಿದರು)

ಶ್ರೀ ಜೆ.ಹೆಚ್. ಪಟೇಲ್ (ಮುಖ್ಯಮಂತ್ರಿಗಳು) :— ಸನ್ಮಾನ್ಯ ಅಧ್ಯಕ್ಷರೇ, ಈಗ ತಾನೇ ಉಪಾಧ್ಯಕ್ಷರಾಗಿ ಚುನಾಯಿಸಲ್ಪಟ್ಟಿರುವಂತಹ ಶ್ರೀ ಚಂದ್ರಶೇಖರ ರೆಡ್ಡಿ ದೇಶ್‌ಮುಖ್

ಮದನ ಅವರು ಅತ್ಯಂತ ಕಷ್ಟಪಟ್ಟು ಕೆಲಸ ಮಾಡತಕ್ಕ ವ್ಯಕ್ತಿಯೂ ಹೌದು, ಆರಾಮ ಸಿಕ್ಕಿದರೆ ಆರಾಮವಾಗಿರುವುದೂ ಕೂಡ ಅವರಿಗೆ ಗೊತ್ತು. ಈ ಎರಡೂ ಗುಣಗಳು ಇರುವ ವ್ಯಕ್ತಿ ಅವರಾಗಿದ್ದಾರೆ. ಅವರು ಅಗರ್ಭ ಶ್ರೀಮಂತರು, ಕೇವಲ ಆರ್ಥಿಕ ಪರಿಸ್ಥಿತಿಯಲ್ಲಿ ಅಷ್ಟೇ ಅಗರ್ಭ ಶ್ರೀಮಂತರಲ್ಲ, ಮಾನಸಿಕವಾಗಿಯೂ ಕೂಡ ಶ್ರೀಮಂತರು ಎಂಬುದು ತಮಗೂ ಗೊತ್ತಿದೆ. ಈ ಸದನದಲ್ಲಿ ಎರಡೂ ಕಡೆಯಿರುವ ಸದಸ್ಯರಿಗೂ ಕಾಲಾವಕಾಶ ಕೊಟ್ಟು, ಹಿಂದೆ ಮಾನ್ಯ ಚಂದ್ರಶೇಖರ್ ಮಾಮನಿಯವರು ಹೇಗೆ ಎಲ್ಲರ ಪ್ರೀತಿಯನ್ನು ಗಳಿಸಿದ್ದರೋ ಅದೇ ರೀತಿಯ ಪ್ರೀತಿಯನ್ನು ಇವರೂ ಕೂಡ ಗಳಿಸಲೆಂದು ನಾನು ಹಾರೈಸುತ್ತಾ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ (ವಿರೋಧ ಪಕ್ಷದ ನಾಯಕರು) :— ಮಾನ್ಯ ಅಧ್ಯಕ್ಷರೇ, ನಮ್ಮ ಜಿಲ್ಲೆಯಿಂದಲೇ ಎರಡನೇ ಬಾರಿಗೆ ಸದಸ್ಯರಾಗಿ ಚುನಾಯಿಸಲ್ಪಟ್ಟಿರುವಂತಹ ಶ್ರೀ ಚಂದ್ರಶೇಖರ್ ರೆಡ್ಡಿ ದೇಶ್‌ಮುಖ್ ಮದನ ಅವರು ಸರ್ವಾನುಮತದಿಂದ ಉಪಾಧ್ಯಕ್ಷ ಸ್ಥಾನಕ್ಕೆ ಆಯ್ಕೆಯಾಗಿರುವುದಕ್ಕಾಗಿ ನನಗೆ ಇವತ್ತು ಬಹಳ ಸಂತೋಷವಾಗಿದೆ. ಅವರು ಎಲ್ಲರನ್ನೂ ಒಗ್ಗೂಡಿಸಿ ವಿಶ್ವಾಸದಿಂದ ತೆಗೆದುಕೊಂಡು ನಿಷ್ಪಕ್ಷಪಾತದಿಂದ ತಮ್ಮ ಕಾರ್ಯವನ್ನು ನಿರ್ವಹಿಸುತ್ತಾರೆ ಎಂಬ ವಿಶ್ವಾಸ ನನಗೆ ಇದೆ. ಈಗಾಗಲೇ ಮಾನ್ಯ ಮುಖ್ಯಮಂತ್ರಿಗಳು ಹೇಳಿದಂತೆ, ಮಾನ್ಯ ಚಂದ್ರಶೇಖರ್ ಮಾಮನಿಯವರು ಯಾವ ರೀತಿ ನಗುತ್ತಾ ನಗುತ್ತಾ ಎಲ್ಲರನ್ನೂ ಜೊತೆಯಲ್ಲಿ ತೆಗೆದುಕೊಂಡು ಒಮ್ಮತದಿಂದ ಅಭಿಪ್ರಾಯವನ್ನು ಕ್ರೋಢೀಕರಿಸಿ ನಿಷ್ಪಕ್ಷಪಾತದಿಂದ ಕೆಲಸ ಮಾಡತಕ್ಕಂತಹ ಖ್ಯಾತಿಯನ್ನು ಪಡೆದಿದ್ದರೋ ಅದೇ ರೀತಿಯಲ್ಲಿ ಶ್ರೀ ಚಂದ್ರಶೇಖರ್ ರೆಡ್ಡಿ ದೇಶ್‌ಮುಖ್ ಮದನ್‌ರವರೂ ಕೂಡ ಸದನವನ್ನು ನಿಭಾಯಿಸುತ್ತಾರೆ ಎಂಬ ಆತ್ಮವಿಶ್ವಾಸ ನನಗೆ ಇದೆ. ಅವರು ಯಾವಾಗಲೂ ಹೆಚ್ಚಿನ ಗೋಜಿಗೆ ಹೋಗುವವರಲ್ಲ. ಮಾನ್ಯ ಮುಖ್ಯಮಂತ್ರಿಗಳು ಹೇಳಿದಂತೆ ಯಾವಾಗ ಕೆಲಸ ಮಾಡಬೇಕೋ ಆಗ ಅವರು ಕೆಲಸ ಮಾಡುತ್ತಾರೆ ಮತ್ತು ಕೆಲಸ ಇಲ್ಲದಿದ್ದಾಗ ನ್ಯಾಚುರಲ್ಲಾಗಿ ಆರಾಮವಾಗಿ ನಡೆದುಕೊಳ್ಳತಕ್ಕಂತಹ ಒಂದು ಅಭ್ಯಾಸವೂ ಕೂಡ ಅವರಿಗಿದೆ. ಅಂತಹ ಒಬ್ಬ ವ್ಯಕ್ತಿಗೆ ಇವತ್ತು ಇಂತಹ ಒಂದು ಸ್ಥಾನ ಸಿಕ್ಕಿದೆ. ಅವರನ್ನು ಸರ್ವಾನುಮತದಿಂದ ಆರಿಸಿದ್ದಕ್ಕಾಗಿ ನಾನು ಇಡೀ ಸದನದ ಸದಸ್ಯರೆಲ್ಲರಿಗೂ ನನ್ನ ಜಿಲ್ಲೆಯ ಪರವಾಗಿ ಹಾಗೂ ನಮ್ಮ ಪಕ್ಷದ ಪರವಾಗಿ ಹಾರ್ದಿಕವಾಗಿ ಅಭಿನಂದಿಸಿ, ಅವರಿಗೆ ಶುಭ ಕೋರುತ್ತೇನೆ.

ಶ್ರೀ ಕೆ.ಎಸ್. ಈಶ್ವರಪ್ಪ (ಶಿವಮೊಗ್ಗ) :— ಮಾನ್ಯ ಅಧ್ಯಕ್ಷರೇ, ಈ ಗೌರವಾನ್ವಿತ ಸದನದ ಉಪಾಧ್ಯಕ್ಷರಾಗಿ ಶ್ರೀ ಚಂದ್ರಶೇಖರ ರೆಡ್ಡಿ ದೇಶ್ ಮುಖ್ ಮದನರವರು ಸರ್ವಾನುಮತದಿಂದ ಆಯ್ಕೆಯಾಗಿರುತ್ತಾರೆ. ಅದಕ್ಕಾಗಿ ಭಾರತೀಯ ಜನತಾ ಪಕ್ಷದ ಪರವಾಗಿ ಅವರಿಗೆ ಹಾರ್ದಿಕ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ಅವರು ಬಹಳ

ಸೌಮ್ಯ ಸ್ವಭಾವದ ವ್ಯಕ್ತಿ, ಎರಡು ಬಾರಿ ಚುನಾವಣೆಯಲ್ಲಿ ಗೆದ್ದು ಬಂದಿದ್ದಾರೆ. ಅವರು ಈ ಒಂದು ಸ್ಥಾನದಲ್ಲಿ ಸರ್ವರನ್ನೂ ಕೂಡ ಒಟ್ಟಿಗೆ ತೆಗೆದುಕೊಂಡು ಹೋಗಿ ಪಕ್ಷಾತೀತವಾಗಿ ಕಾರ್ಯನಿರ್ವಹಿಸುವಂತಾಗಲಿ, ಈ ಪ್ರಯತ್ನದಲ್ಲಿ ಅವರು ಯಶಸ್ವಿಯಾಗಲಿ ಎಂದು ಆಶಿಸುತ್ತಾ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) :— ಮಾನ್ಯ ಅಧ್ಯಕ್ಷರೇ, ಮಾನ್ಯ ಚಂದ್ರಶೇಖರ ರೆಡ್ಡಿ ದೇಶ್‌ಮುಖ್ ಮದನರವರು ಸರ್ವಾನುಮತದಿಂದ ಈ ಸದನದ ಉಪಾಧ್ಯಕ್ಷರಾಗಿ ಆಯ್ಕೆಯಾಗಿರುವುದನ್ನು ನಾನು ಬಹಳ ಮುಕ್ತಕಂಠದಿಂದ ಸ್ವಾಗತಿಸುತ್ತೇನೆ. ಮಾನ್ಯ ಚಂದ್ರಶೇಖರ ಮಾಮಿನಯವರು ಆ ಪೀಠದಲ್ಲಿ ಕುಳಿತಿದ್ದಾಗ ಬಹಳ ಹೆಚ್ಚಿನ ಗಾಂಭೀರ್ಯತೆ ಕಾಣುತ್ತಿತ್ತು. ಅವರು ಎಲ್ಲರ ಜೊತೆಯಲ್ಲಿ ಹೊಂದಿಕೊಂಡು ಹೋಗುತ್ತಾ ಗಾಂಧಿಟೋಪಿ ಹಾಕಿಕೊಂಡು ಕುಳಿತುಕೊಂಡಿದ್ದರೆ ಒಂದು ಶಕ್ತಿ ಅವರಲ್ಲಿ ಕಾಣುತ್ತಿತ್ತು. ಅವರು ಎಲ್ಲರನ್ನೂ ಬಹಳ ಪ್ರೀತಿಯಿಂದ ನೋಡಿಕೊಳ್ಳುತ್ತಿದ್ದರು. ಅದೇ ರೀತಿಯಲ್ಲಿ ಇವರೂ ಕೂಡ ಆ ದಾರಿಯನ್ನೇ ಅನುಸರಿಸಿ ನಮ್ಮೆಲ್ಲರ ಜೊತೆಯಲ್ಲಿ ಹೊಂದಿಕೊಂಡು ಅವರು ಈ ಸದನವನ್ನು ಅತ್ಯಂತ ಉನ್ನತ ಮಟ್ಟಕ್ಕೆ ತೆಗೆದುಕೊಂಡು ಹೋಗುವಂತಾಗಲಿ. ಇದಕ್ಕಾಗಿ ನಾವು ಅವರಿಗೆ ಎಲ್ಲ ರೀತಿಯ ಸಹಕಾರವನ್ನೂ ಕೂಡ ಕೊಡುತ್ತೇವೆ. ಹಿಂದೆ ನಡೆದುಕೊಂಡು ಬಂದಿರುವ ಅನೇಕ ಸಂಪ್ರದಾಯಗಳಂತೆ ಉಪಾಧ್ಯಕ್ಷರ ಸ್ಥಾನವನ್ನು ವಿರೋಧ ಪಕ್ಷಗಳಿಗೆ ಬಿಟ್ಟುಕೊಡಬೇಕಾಗಿತ್ತು. ಪ್ರಜಾತಂತ್ರ ವ್ಯವಸ್ಥೆಯಲ್ಲಿ ವಿರೋಧ ಪಕ್ಷದವರು ಉಪಾಧ್ಯಕ್ಷರಾಗುವ ಅವಕಾಶ ಇದರಿಂದ ಸಿಕ್ಕಿದಂತಾಗುತ್ತಿತ್ತು. ಲೋಕಸಭೆ ಒಳಗೊಂಡಂತೆ ಎಲ್ಲಾ ಕಡೆಯೂ ಕೂಡ ಉಪಾಧ್ಯಕ್ಷ ಸ್ಥಾನವನ್ನು ವಿರೋಧ ಪಕ್ಷಗಳಿಗೆ ನೀಡಬೇಕಾಗಿತ್ತು ಎಂದು ನಾನು ಹೇಳಿದಾಕ್ಷಣ ನಾನು ಮಾನ್ಯ ಚಂದ್ರಶೇಖರ ರೆಡ್ಡಿ ದೇಶ್ ಮುಖ್ ಮದನರವರ ಆಯ್ಕೆಯನ್ನು ಪ್ರಶ್ನಿಸುತ್ತಿದ್ದೇನೆ ಎಂದು ಯಾರೂ ಭಾವಿಸಬಾರದು. ಪ್ರತಿಪಕ್ಷದ ಸದಸ್ಯರೊಬ್ಬರು ಆ ಸ್ಥಾನಕ್ಕೆ ಬರುವಂತಾಗಿದ್ದರೆ ನಿಜಕ್ಕೂ ಅದಕ್ಕೆ ಹೆಚ್ಚಿನ ಮಹತ್ವ, ಗಾಂಭೀರ ಬರುತ್ತಿತ್ತು ಎಂಬ ಮಾತನ್ನು ನಾನು ತಮ್ಮ ಮೂಲಕ ಹೇಳುತ್ತಾ, ಮುಂದೆಯಾದರೂ ಕೂಡ ಆ ಸಂಪ್ರದಾಯ ಬರಲೆಂದು ಆಶಿಸುತ್ತೇನೆ.ಮಾನ್ಯ ಮಾಮನಿಯವರಂತೆ ಇವರೂ ಕೂಡ ಜುಬ್ಬಾ, ಪೈಜಾಮ ಹಾಕುತ್ತಾರೆ, ಅವರಂತೆ ಇವರೂ ಕೂಡ ಒಂದು ಟೋಪಿಯನ್ನು ಹಾಕಿಕೊಂಡರೆ ಈ ಸದನಕ್ಕೆ ಬಹಳ ಹೆಚ್ಚಿನ ಗಂಭೀರತೆ ಬರುತ್ತದೆ ಎಂದು ನಾನಾದರೂ ಅಂದುಕೊಂಡಿದ್ದೇನೆ. ಹೆಚ್ಚಿನ ತಿಳುವಳಿಕೆಯುಳ್ಳರವರೂ, ಗುಲ್ಬರ್ಗಾ ಜಿಲ್ಲೆಯಲ್ಲಿ ಅಪಾರವಾದ ಸೇವೆಯನ್ನು ಮಾಡಿರತಕ್ಕಂತಹ ಹಿರಿಯ ಸದಸ್ಯಮಿತ್ರರಾದ ಶ್ರೀ ಮದನ್ ರವರಿಗೆ ನಾನು ಎಲ್ಲಾ ರೀತಿಯ ಬೆಂಬಲವನ್ನು ಕೊಡುತ್ತೇವೆ ಎಂದು ಹೇಳಿ, ಅವರ ಆಯ್ಕೆಯನ್ನು ಮತ್ತೊಮ್ಮೆ ಸ್ವಾಗತಿಸುತ್ತಾ ಅವರನ್ನು ಅಭಿನಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಜೆ.ವಿ. ಶ್ರೀರಾಮರೆಡ್ಡಿ (ಬಾಗೇಪಲ್ಲಿ) :— ಮಾನ್ಯ ಅಧ್ಯಕ್ಷರೇ, ಉಪಾಧ್ಯಕ್ಷರಾಗಿ ಶ್ರೀ ಚಂದ್ರಶೇಖರ ರೆಡ್ಡಿ ದೇಶ್‌ಮುಖ್ ಮದನೂರವರು ಆಯ್ಕೆಯಾಗಿರುವುದನ್ನು ನಾನು ಸ್ವಾಗತಿಸುತ್ತಾ ಅವರು ಆಡಳಿತ ಪಕ್ಷ ಮತ್ತು ವಿರೋಧ ಪಕ್ಷಗಳ ಸದಸ್ಯರೆಲ್ಲರನ್ನೂ ಕೂಡ ವಿಶ್ವಾಸಕ್ಕೆ ತೆಗೆದುಕೊಂಡು ಸಮರ್ಪಕವಾಗಿ ಈ ಸದನವನ್ನು ನಡೆಸಲೆಂದು ಹಾರೈಸುತ್ತಾ ಮತ್ತೊಮ್ಮೆ ಅವರನ್ನು ಅಭಿನಂದಿಸುತ್ತಾ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಕೆ.ಎಸ್. ಪುಟ್ಟಣ್ಣಯ್ಯ (ಪಾಂಡವಪುರ) :— ಸನ್ಮಾನ್ಯ ಅಧ್ಯಕ್ಷರೇ, ಬಹಳ ಕಷ್ಟಕರವಾದ ಜಿಲ್ಲೆಯಿಂದ ಬಂದು, ಬಹಳ ನೋವಿನ ವರ್ಗದ ಜನರನ್ನು ಸ್ಪಂದಿಸಿರತಕ್ಕಂಥವರಾದ, ವಿಶೇಷವಾಗಿ ಚುನಾವಣೆ ಇಲ್ಲದೇ ಉಪಾಧ್ಯಕ್ಷ ಸ್ಥಾನಕ್ಕೆ ಅವಿರೋಧವಾಗಿ ಆಯ್ಕೆಯಾದ ಶ್ರೀ ಚಂದ್ರಶೇಖರ ರೆಡ್ಡಿ ದೇಶ್‌ಮುಖ್ ಮದನ್ ಅವರನ್ನು ನಾನು ಅಭಿನಂದಿಸುತ್ತೇನೆ. ಆ ಪವಿತ್ರವಾದ ಸ್ಥಾನಕ್ಕೆ ಚುನಾವಣೆ ಎಂಬುದು ನಡೆಯಬಾರದು. ನಿನ್ನೆಯ ಪರಿಸ್ಥಿತಿ ನೋಡಿದರೆ ಚುನಾವಣೆ ನಡೆಯಬಹುದೋ ಏನೋ ಎಂಬ ಒಂದು ಸ್ಥಿತಿ ಇತ್ತು. ಹಾಗೆ ಆಗದೇ ಅವರು ಅವಿರೋಧವಾಗಿ ಉಪಾಧ್ಯಕ್ಷರಾಗಿ ಆಯ್ಕೆಯಾಗಿ ಈ ಪವಿತ್ರವಾದ ಸ್ಥಾನವನ್ನು ಅಲಂಕರಿಸಿದ್ದಾರೆ. ಅವರು ಸಮಾನ ಮನಸ್ಸಿನಿಂದ ಈ ಸದನವನ್ನು ನಡೆಸಿಕೊಂಡು ಹೋಗಲೆಂದು ಆಶಿಸುತ್ತಾ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಬಿ. ಮುನಿಯಪ್ಪ (ಗಾಂಧಿನಗರ) :— ಸನ್ಮಾನ್ಯ ಅಧ್ಯಕ್ಷರೇ, ಉಪಾಧ್ಯಕ್ಷರಾಗಿ ಅವಿರೋಧವಾಗಿ ಆಯ್ಕೆಯಾದ ಶ್ರೀ ಚಂದ್ರಶೇಖರ ರೆಡ್ಡಿ ದೇಶ್‌ಮುಖ್ ಮದನೂರವರನ್ನು ನಾನು ಅಭಿನಂದಿಸುತ್ತಾ ಅವರು ಈ ಸದನದಲ್ಲಿ ಇರತಕ್ಕಂತಹ ಎಲ್ಲಾ ಸದಸ್ಯರ ಹಕ್ಕನ್ನು ಮತ್ತು ಹಿತವನ್ನು ಕಾಪಾಡುವಲ್ಲಿ ಯಶಸ್ವಿಯಾಗಲಿ ಎಂದು ಆಶಿಸಿ ಅವರಿಗೆ ಶುಭವನ್ನು ಕೋರುತ್ತಾ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಸೈಯ್ಯದ್ ಜುಲ್ಫಿಕರ್ ಹಶ್ಮಿ (ಬೀದರ್) :— ಮಾನ್ಯ ಅಧ್ಯಕ್ಷರೇ, ಈ ಸದನದ ಉಪಾಧ್ಯಕ್ಷರಾಗಿ ಆಯ್ಕೆಯಾದ ಶ್ರೀ ಚಂದ್ರಶೇಖರ ರೆಡ್ಡಿ ದೇಶ್‌ಮುಖ್ ಮದನರವರನ್ನು ನಾನು ಹೃತ್ಪೂರ್ವಕವಾಗಿ ಅಭಿನಂದಿಸುತ್ತೇನೆ. ಅವರು ಉಸ್ಮಾನಿಯ ಯೂನಿವರ್ಸಿಟಿಯಲ್ಲಿ ಖರ್ಬು ಮೀಡಿಯಮ್‌ನಲ್ಲಿ ವ್ಯಾಸಂಗ ಮಾಡಿದವರಾಗಿದ್ದಾರೆ. ಅದಕ್ಕಾಗಿ ಉರ್ದುವಿನಲ್ಲಿ ಒಂದು ಶಾಯಿರಿ ಹೇಳಿ ನನ್ನ ಅಭಿನಂದನೆಗಳನ್ನು ಅವರಿಗೆ ಸಲ್ಲಿಸುತ್ತೇನೆ.

(ಮಾನ್ಯ ಸದಸ್ಯರು ಉರ್ದುವಿನಲ್ಲಿ ಒಂದು ಶಾಯಿರಿಯನ್ನು ಹೇಳಿದರು)

SRI S. RAJENDRAN (KGF): Mr. Speaker, Sir, my bearty welcome to our newly elected Sri. Chandrashekhara Reddy Deshmukh Madana and I congratulate him on his election to the post on behalf

of myself and my party. I request my Deputy Speaker to maintain cordial relationship with all the Members - how our Hon'ble Speaker is controlling this House, how he is maintaining this House, in the same way I hope he would conduct the proceedings of the House and provide opportunity to independents also. ನನಗೆ ಇವತ್ತು ಬಹಳ ಸಂತೋಷವಾಗಿದೆ. ಸರ್ಕಾರದವರು ಯಾವ ಕೆಲಸವನ್ನೂ ಕೂಡ ವಿಳಂಬವಿಲ್ಲದೆ ಮಾಡಿದ್ದಾರೋ ಇಲ್ಲವೋ ಗೊತ್ತಿಲ್ಲ. ಆದರೆ ಒಳ್ಳೆಯ ಸಮಯದಲ್ಲಿ ಸೂಕ್ತ ವ್ಯಕ್ತಿಯನ್ನು ಉಪಾಧ್ಯಕ್ಷರಾಗಿ ಬೇಗನೇ ಆಯ್ಕೆ ಮಾಡಿದ್ದಾರೆ. ಉಪಾಧ್ಯಕ್ಷರಾಗಿ ಆಯ್ಕೆಯಾದ ಶ್ರೀ ಚಂದ್ರಶೇಖರ ರೆಡ್ಡಿ ದೇಶ್‌ಮುಖ್ ಮದನ್‌ರವರಿಗೆ ಮತ್ತೊಮ್ಮೆ ನನ್ನ ಅಭಿನಂದನೆಗಳನ್ನು ಸಲ್ಲಿಸುತ್ತಾ, ಇಷ್ಟು ಮಾತುಗಳನ್ನಾಡಲು ಅವಕಾಶ ಮಾಡಿಕೊಟ್ಟ ಮಾನ್ಯ ಸಭಾಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀಮತಿ ಬಿ.ಟಿ. ಲಲಿತಾನಾಯಕ್ (ದೇವದುರ್ಗ) :— ಸನ್ಮಾನ್ಯ ಅಧ್ಯಕ್ಷರೆ, ಇವತ್ತಿನ ದಿವಸ ಉಪಾಧ್ಯಕ್ಷರಾಗಿ, ಆಯ್ಕೆಯಾದ ಶ್ರೀಮಾನ್ ಚಂದ್ರಶೇಖರ ರೆಡ್ಡಿ ದೇಶ್‌ಮುಖ್ ಮದನರವರಿಗೆ ಹಾರ್ದಿಕವಾಗಿ ಅಭಿನಂದಿಸುತ್ತಾರೆ, ಅವರು ಯಾವಾಗಲೂ ಬಹಳ ಉತ್ತಮವಾದ ಸ್ಥಿತಿಯಲ್ಲಿ ಕೆಲಸ ಮಾಡುತ್ತಾರೆಂದು ಹೇಳುತ್ತಾ, ನಮ್ಮ ಮುಖ್ಯಮಂತ್ರಿಗಳು ಹೇಳಿದರು, ಆಗರ್ಭ ಶ್ರೀಮಂತರು ಹೌದು ಎಂದು. ಬಹುಶಃ ಜ್ಯೋತಿರೆಡ್ಡಿಯವರು ಆಗರ್ಭ ಶ್ರೀಮಂತರಾಗಿದ್ದರೆ ಅವರಿಗೂ ಕೂಡ ಆ ಸ್ಥಾನ ಸಿಗುತ್ತಿತ್ತೋ ಏನೋ, ಅವರು ಬಹುಶಃ ನೀತಿಯಿಂದ ಹೇಳಿದರು, ನಡತೆಯಲ್ಲೂ ಕೂಡ ಅವರು ಆಗರ್ಭ ಶ್ರೀಮಂತರು ಎಂದು ಹೇಳುತ್ತೇನೆ. ಒಂದು ನಮ್ಮ ಬೇಡಿಕೆ ಏನೆಂದರೆ, ತಾವುಗಳು ಒಂದಾದರೂ ಕೂಡ ಮಹಿಳೆಯರಿಗೆ ಈ ಸ್ಥಾನ ನೀಡುವುದಕ್ಕೆ ನೀವು ವ್ಯವಸ್ಥೆ ಮಾಡಿ. ಅವರು ಉಪಾಧ್ಯಕ್ಷರಾಗಿದ್ದಕ್ಕೆ ನಮಗೆ ಅಭ್ಯಂತರ ಏನೂ ಇಲ್ಲ. ಬಹಳ ಸಂತೋಷದಿಂದ ನಾವು ಅಭಿನಂದಿಸುತ್ತೇವೆ. ಆದರೂ ಕೂಡ ಮಹಿಳೆಯರಿಗೆ ಸರಿಯಾದ ರೀತಿಯಲ್ಲಿ ಸ್ಥಾನಮಾನ ಸಿಗುವುದಿಲ್ಲ ಎನ್ನುವ ನೋವು ನಮಗಿನ್ನು ಸದಾ ಕಾಡುತ್ತದೆ. ಆದ್ದರಿಂದ ಈ ಸದನದಲ್ಲಿ ಇರತಕ್ಕಂತಹವರು ಬಹಳಷ್ಟು ತಾಳ್ಮೆಯಿಂದ ಇರಬೇಕು ಎನ್ನುವ ಮಾತಿಗೆ ಒಂದು ಮಾತು ಹೇಳುತ್ತೇನೆ, ಉತ್ತಮನಿಗೆ ಬಂದ ಕೋಪ ಕ್ಷಣ ಮಾತ್ರ ಇರುತ್ತದೆ, ಮಧ್ಯಮನಿಗೆ ಬಂದ ಕೋಪ ಎರಡು ಘಳಿಗೆ ಇರುತ್ತದೆ, ಮತ್ತು ಅಧಮನಿಗೆ ಅಹೋರಾತ್ರಿ ಇರುತ್ತದೆ, ಪಾಪಿಷ್ಟನಲ್ಲಿ ಸಾಯುವ ತನಕವೂ ಇರುತ್ತದೆ . ಆದ್ದರಿಂದ ಚಂದ್ರಶೇಖರ ಮದನ ಬಹಳಷ್ಟು ತಾಳ್ಮೆ ಉಳ್ಳವರಾಗಿದ್ದಾರೆ, ಯಾವಾಗಲೂ ಆ ತಾಳ್ಮೆಯನ್ನು ಅವರು ಉಪಯೋಗಿಸುತ್ತಾರೆ ಎಂದು ಹೇಳಿ, ಮಹಿಳೆಯರಿಗೂ ಕೂಡ ಕೋನೇಪಲ್ಲ ಅವರು ಸದನದಲ್ಲಿ ಮಾತನಾಡುವಾಗ

ಅವರಿಗೂ ಕೂಡ ಸಾಕಷ್ಟು ಅವಕಾಶ ಮಾಡಿ ಕೊಡಲಿ ಎನ್ನುವ ಮಾತನ್ನು ಹೇಳಿ ಮತ್ತೊಮ್ಮೆ ಅಭಿನಂದನೆ ಸಲ್ಲಿಸುತ್ತೇನೆ.

ಶ್ರೀಮತಿ ಎನ್. ಜ್ಯೋತಿ ರೆಡ್ಡಿ (ಗೌರಿಬಿದನೂರು) :— ಮಾನ್ಯ ಅಧ್ಯಕ್ಷರೆ, ಚಂದ್ರಶೇಖರ ರೆಡ್ಡಿ ದೇಶ್ ಮುಖ್ ಮದನರವರು ಉಪಾಧ್ಯಕ್ಷರಾಗಿ ಆಯ್ಕೆಯಾಗಿರುವುದಕ್ಕೆ ನನ್ನ ಹೃತ್ಪೂರ್ವಕವಾದ ಅಭಿನಂದನೆಗಳನ್ನು ಸಲ್ಲಿಸುತ್ತಾ, ಏನು ಶ್ರೀಮಾನ್ ಮಾಮನಿಯವರು ಮಹಿಳೆಯರಿಗೆ ಒಂದು ತರಹದ ಸ್ಫೂರ್ತಿಯಾಗಿ ಯಾವಾಗಲೂ ನಮ್ಮನ್ನು ನಗಿಸುತ್ತಾ, ನಮಗೆ ಏನಾದರೂ ಕೆಲಸಕಾರ್ಯಗಳು ಆಗಬೇಕಾದರೂ ಸಹ ತುಂಬಾ ಸಂತೋಷದಿಂದ ಮಾಡಿಕೊಡುತ್ತಿದ್ದರು. ಅದೇ ರೀತಿಯಲ್ಲಿ ದೇಶ್‌ಮುಖ್ ರವರೂ ಸಹ ನಮಗೆ ಸಹಾಯ ನೀಡುತ್ತಾರೆಂದು ಹೇಳುತ್ತಾ, ಭಗವಂತನು ಅವರಿಗೆ ಇಡೀ ಸದನವನ್ನು ಒಳ್ಳೆಯ ರೀತಿಯಲ್ಲಿ ತೆಗೆದುಕೊಂಡು ಹೋಗುವುದಕ್ಕೆ ಶಕ್ತಿ ಸಾಮರ್ಥ್ಯ ಕೊಡಲಿ ಎಂದು ಹಾರೈಸುತ್ತಾ ನನ್ನ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ಅಧ್ಯಕ್ಷರೆ, ಶ್ರೀರಾಮರೆಡ್ಡಿಯವರು ಶ್ರೀಮತಿ ಜ್ಯೋತಿ ರೆಡ್ಡಿಯವರು ಏಕೆ ಹಿಂದಕ್ಕೆ ತೆಗೆದುಕೊಂಡರು ಎನ್ನುವ ಒಂದು ಮಾತನ್ನು ಹೇಳಿದರು. ಅದಕ್ಕೆ ತಾವು ಅಪ್ಪಣೆ ಕೊಟ್ಟರೆ ಉತ್ತರ ಕೊಡುವುದಕ್ಕೆ ಇಷ್ಟ ಪಡುತ್ತೇನೆ.

ಶ್ರೀ ಸಿ.ಎಸ್. ಪುಟ್ಟೇಗೌಡ (ಶ್ರವಣಬೆಳಗೊಳ) :— ಮಾನ್ಯ ಅಧ್ಯಕ್ಷರೆ, ಇವತ್ತು ಏನು ಉಪಾಧ್ಯಕ್ಷರಾಗಿ ಚಂದ್ರಶೇಖರ ರೆಡ್ಡಿ ದೇಶ್ ಮುಖ್ ಮದನರವರು ಆಯ್ಕೆಯಾಗಿದ್ದಾರೆ, ಬಹಳ ಸರಳರೂ, ಸೌಜನ್ಯಶೀಲರೂ, ಚಂದ್ರಶೇಖರ ಮಾಮನಿಯವರ ಜಾಗವನ್ನು ತುಂಬುವಂತಹ ಸಾಮರ್ಥ್ಯ ಹೊಂದಿರುವವರೂ, ಅವರಿಗೆ ಏನು ಪಕ್ಷಾತೀತವಾಗಿ ಎಲ್ಲರೂ ಸೇರಿ ಉಪಾಧ್ಯಕ್ಷರಾಗಿ ಆಯ್ಕೆ ಮಾಡಿದ್ದೇವೆ, ಅದು ಒಳ್ಳೆಯ ಆಯ್ಕೆ ಎಂದು ಹೇಳಿ, ಎಲ್ಲರನ್ನೂ ಚೆನ್ನಾಗಿ ನೋಡಿಕೊಂಡು ನಮ್ಮನ್ನೂ ಕೂಡ ಹಿಂದಿನ ಬೆಂಚಿನಲ್ಲಿರುವವರನ್ನೂ ಕೂಡ ತಾವು ಅವಕಾಶ ಕೊಡಬೇಕೆಂದು ಹೇಳಿ ಅವರಿಗೆ ಭಗವಂತ ಒಳ್ಳೆಯದು ಮಾಡಲಿ ಎಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

ಅಧ್ಯಕ್ಷರು :— ಮಾನ್ಯ ಚಂದ್ರಶೇಖರ ರೆಡ್ಡಿ ದೇಶ್‌ಮುಖ್ ಮದನರವರು ಉಪಾಧ್ಯಕ್ಷರಾಗಿ ಈ ಸಭೆಯ ಸರ್ವಾನುಮತದ ಅಭಿಪ್ರಾಯದಿಂದ ಆಯ್ಕೆ ಆಗಿರುವುದು ನನಗೆ ಬಹಳ ಸಂತೋಷ. ಚಂದ್ರಶೇಖರ ರೆಡ್ಡಿ ದೇಶ್‌ಮುಖ್ ಮದನರವರು ಬಹಳ ವರ್ಷಗಳಿಂದ ನನಗೆ ಪರಿಚಯವಿದ್ದಾರೆ. ಸೌಮ್ಯ ಸ್ವಭಾವದವರು, ಎಮ್.ಎನ್. ಪಾಟೀಲರು ಉಪಾಧ್ಯಕ್ಷರಾಗಿ ಆಯ್ಕೆಯಾಗಿದ್ದಾಗ ಅವರು ಬಹಳ ಒಳ್ಳೆಯ ಸಹಕಾರ ಕೊಟ್ಟರು. ಅವರಿಗೆ ಮಂತ್ರಿ ಮಂಡಲಕ್ಕೆ ಹೋಗತಕ್ಕಂತಹ ಅವಕಾಶ ಸಿಕ್ಕಿತು. ಮಾಮನಿಯವರು ಬಹಳ ಒಳ್ಳೆಯ ವ್ಯಕ್ತಿ, ಅತ್ಯಂತ ಆತ್ಮೀಯತೆಯಿಂದ ನನ್ನ ಜೊತೆ ನಡೆದುಕೊಂಡರು. ಮಾಮನಿಯವರ ಅಕಾಲಿಕ ಮರಣ ವೈಯಕ್ತಿಕವಾಗಿ ನನ್ನನ್ನು ಬಹಳ ದುಃಖಕ್ಕೆ ಈಡು

ಮಾಡಿತು. ನಾನು ಕೆಲವು ದಿವಸಗಳು ಆ ದುಃಖದಿಂದ ಹೊರಗೆ ಬರುವುದಕ್ಕೆ ಸಾಧ್ಯವಾಗಲಿಲ್ಲ. ಅತ್ಯಂತ ಆತ್ಮೀಯತೆಯಿಂದ ಅವರು ನನ್ನ ಜೊತೆ ನಡೆದುಕೊಂಡಿದ್ದರು. ಮಾನ್ಯ ದೇಶ್‌ಮುಖ್ ಮದನರವರಿಗೂ ನಾನು ಇಷ್ಟೇ ಹೇಳುತ್ತೇನೆ, ಉಳಿದ ಅಧಿಕಾರ ಅವಧಿಗೆ ನಿಮ್ಮೊಡನೆ ಆತ್ಮೀಯತೆಯಿಂದ ಸೌಹಾರ್ದತೆಯಿಂದ ನನ್ನ ಎಲ್ಲಾ ಸಹಕಾರ, ಪ್ರೋತ್ಸಾಹವನ್ನು ಕೊಟ್ಟು ಈ ಕಾರ್ಯಕಲಾಪಗಳನ್ನು ತಾವು ಮತ್ತು ನಾನು ಜವಾಬ್ದಾರಿಯಿಂದ ಮತ್ತು ಗೌರವದಿಂದ ತೆಗೆದುಕೊಂಡು ಹೋಗೋಣ ಎನ್ನುವ ಮಾತು ಹೇಳಿ, ಉಪಾಧ್ಯಕ್ಷರು ಎಂದರೆ, ಅವರು ಎಲ್ಲಾ ಕಾರಣಗಳಿಗೂ ಅಧ್ಯಕ್ಷರು. ನನ್ನ ಗೈರುಹಾಜರಿಯಲ್ಲಿ ಅವರು ಅಧ್ಯಕ್ಷರ ಪೀಠವನ್ನು ಅಲಂಕರಿಸುತ್ತಾರೆ. ಗೌರವ ಪ್ರೀತಿ ಆದರಗಳಿಗೆ ಎಲ್ಲಾ ವಿಷಯಗಳಿಗೆ ಸಭಾಧ್ಯಕ್ಷರಿಗೆ ಎಷ್ಟು ಗೌರವ ಸಿಗಬೇಕು, ಅಷ್ಟೇ ಗೌರವ ಎಲ್ಲಾ ವಲಯಗಳಿಂದ ಉಪಾಧ್ಯಕ್ಷರಿಗೂಕೂಡ ಸಿಗಬೇಕೆಂದು ಹೇಳಿ ಅವರಿಗೆ ನನ್ನ ಹೃತ್ಪೂರ್ವಕವಾದ ವಂದನೆಗಳನ್ನು ಸಲ್ಲಿಸುತ್ತೇನೆ. ಈಗ ಚಂದ್ರಶೇಖರ ರೆಡ್ಡಿ ದೇಶ್‌ಮುಖ್ ಮದನರವರು ತಮ್ಮ ಎರಡು ಮಾತುಗಳನ್ನು ಈ ಸಭೆಗೆ ತಿಳಿಸಬೇಕೆಂದು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಚಂದ್ರಶೇಖರ ರೆಡ್ಡಿ ದೇಶ್‌ಮುಖ್ ಮದನ (ಉಪಾಧ್ಯಕ್ಷರು) :— ಅಧ್ಯಕ್ಷರೇ, ಸಭಾನಾಯಕರೆ, ವಿರೋಧ ಪಕ್ಷದ ನಾಯಕರೆ, ಇನ್ನಿತರ ಎಲ್ಲಾ ಪಕ್ಷಗಳ ನಾಯಕರೆ, ಮತ್ತು ಸದಸ್ಯರೆ, ಮೊಟ್ಟಮೊದಲು ನನ್ನನ್ನು ಅವಿರೋಧವಾಗಿ ಆರಿಸಿದ್ದಕ್ಕಾಗಿ ತಮ್ಮೆಲ್ಲರಿಗೂ ಧನ್ಯವಾದಗಳನ್ನು ಅರ್ಪಿಸುತ್ತೇನೆ. ನಮ್ಮ ಅಧ್ಯಕ್ಷರು ಹೇಳಿದ ಪ್ರಕಾರ ಯಾವ ಪ್ರಕಾರ ನಮ್ಮ ಮಾಮನಿಯವರು ಈ ಸದನವನ್ನು ತೆಗೆದುಕೊಂಡು ಹೋಗುತ್ತಿದ್ದರು, ಅದೇ ಪ್ರಕಾರ ನಾನೂ ಸಹ ತಮ್ಮೆಲ್ಲರನ್ನೂ ವಿಶ್ವಾಸಕ್ಕೆ ತೆಗೆದುಕೊಂಡು ಈ ಸದನದ ಗೌರವ ಘನತೆ ಕಾಪಾಡಲು ತಮ್ಮೆಲ್ಲರ ಸಹಕಾರವನ್ನು ಕೋರಿ ಇವತ್ತಿನ ದಿವಸ ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

3) ಅರ್ಜಿಗಳನ್ನೊಪ್ಪಿಸುವುದು.

ಶ್ರೀ ಕುಂಭೆ ಸುಂದರರಾವ್ (ಸುರತ್ಕಲ್) :— ಮಾನ್ಯ ಅಧ್ಯಕ್ಷರೆ, ದೀಪಾ ಶಿಕ್ಷಣ ಸಂಸ್ಥೆ ಮತ್ತು ಸೇವಾ ಟ್ರಸ್ಟ್ ಬೋಗಾದಿ, ಮೈಸೂರು ಇವರು ನಡೆಸುತ್ತಿರುವ ಕನ್ನಡ ಮಾಧ್ಯಮ ಶಾಲೆಯಲ್ಲಿ 5ನೇ ತರಗತಿಯನ್ನು ಪ್ರಾರಂಭಿಸಲು ಅನುಮತಿ ನೀಡುವ ಅರ್ಜಿಯನ್ನು ಸಭೆಗೆ ಒಪ್ಪಿಸುತ್ತಿದ್ದೇನೆ.

ಶ್ರೀ ಬಿ.ಆರ್. ಯಾವಗಲ್ (ನರಗುಂದ) :— ಮಾನ್ಯ ಅಧ್ಯಕ್ಷರೆ, ಮತ್ತೇಕೆರೆ ಬಡಾವಣೆಯ 1ನೇ 'ಸಿ ಅಡ್ಡರಸ್ತೆಯಲ್ಲಿರುವ 3 ಅಡಿ ಅಗಲದ ರಸ್ತೆ ಜಾಗವನ್ನು ಒತ್ತುವರಿ ಮಾಡಿಕೊಂಡಿರುವ ಕುರಿತು ಶ್ರೀ ಪಿ.ಸಿ. ಸಿದ್ದನಗೌಡರವರು ಸಹಿ